ಇ) ಬಿಡುಗಡೆಯಾದ ಆಹಾರ ಧಾನ್ಯದಲ್ಲಿ ವಿಚಾರಿಗಿರುವ ಮತ್ತು ಉಳಿದಿರುವ ಹಾಗೂ ಆ ಪೈಕಿ ಉಪಯೋಗಿಸಿದ ಆಹಾರ ಧಾನ್ಯದ ವಿವರಗಳನ್ನು ತಃಖ್ತೆ 2ರಲ್ಲಿ ಲಗತ್ತಿಸಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳ ಆಪರೇಟರ್‌ಗಳ ನೇಮಕಾತಿ

2352-ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕೆರು ನೀರು ಸರಬರಾಜು ಯೋಜನೆಯ ಅಡಿಯಲ್ಲಾಗಲಿ, ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಾಗಲಿ, ಆಪರೇಟರುಗಳ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಪರಿಷತ್‌ಗಳಿಗಾಗಲಿ, ಮಂಡಲ ಪಂಚಾಯಿತಿಗಳಿಗಾಗಲಿ, ಅಧಿಕಾರವಿಲ್ಲದಕ್ಕಾಗಿ ನೀರು ಸರಬರಾಜು ಆಗದೇ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಚುಕ್ಕೆ ಗುರುತಿನ ಪ್ರಶ್ನೆ 288ಕ್ಕೆ ದಿನಾಂಕ: 17.12.90 ರಂದು ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆಯಾಗಿದ್ದು ತಿಳಿದು ಬಂದಿರುತ್ತದೆಂದು ತಿಳಿಸಲಾಗಿದೆ. ಈ ತೊಂದರೆ ಇಡೀ ರಾಜ್ಯಕ್ಕೆ ಅನ್ವಯವಾಗುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆ ಇದೆಯೆಂದು ಉತ್ತರ ನೀಡಿರುವುದು ಕೆಲವು ಜಿಲ್ಲೆಗಳಲ್ಲಿ ಆಪರೇಟರ್‌ಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ ಎಂಬ ಅರ್ಥವಲ್ಲವೇ?

ಇ) ಒಂದು ವೇಳೆ ಆ ಪ್ರಕಾರ ಅನುಮತಿ ನೀಡಿದ್ದರೆ ಆ ಜಿಲ್ಲೆಗಳು ಯಾವುವು?

ಈ) ನನ್ನ ಪ್ರಶ್ನೆಗೆ ಯೋಜನೆಗಳ ಚಾಲ್ತಿಗಾಗಿ ತೊಂದರೆಯಾಗದಂತೆ ಆಪರೇಟರ್‌ಗಳನ್ನು ನೇಮಕ ಮಾಡಲು ಸರ್ಕಾರ ಯೋಜಿಸುತ್ತಿದೆ ಎಂದು ತಿಳಿಸಿ ಸುಮಾರು ಒಂದು ವರ್ಷವಾದರೂ ಸಹ ಇವುಗಳ ಬಗ್ಗೆ ಯಾವ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು?

ಉ) ಇದಕ್ಕಾಗಿ ಸರ್ಕಾರ ಮುಂದಿನ ವ್ಯವಸ್ಥೆ ಯಾವಾಗ ಮಾಡುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇಡೀ ರಾಜ್ಯದಲ್ಲಿ ಆಪರೇಟರ್‌ಗಳ ಕೊರತೆಯಿಂದಾಗಿ ಕುಡಿಯುವ ನೀರು ಸರಬರಾಜಿನ ಮೂಲಕ ನೀರನ್ನು ಒದಗಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಅಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉ)

ನೀರು ಸರಬರಾಜು ಯೋಜನೆಯನ್ನು ನಡೆಸಲು ಮಂಡಲ ಪಂಚಾಯತಿಗಳೇ ಸ್ಥಳೀಯವಾಗಿ ವ್ಯವಸ್ಥೆ ಮಾಡಿಕೊಂಡಿರುತ್ತವೆ.

ಸೇಡಂ ಕ್ಷೇತ್ರದ ಮಳಖೇಡ ರಿಬ್ಬನ್‌ಪಲ್ಲಿ ಹಾಗೂ ಸೇಡಂ ಕೂಡ್ಲಾ ರಸ್ತೆಗಳ ಕುರಿತು

2351 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮಳಖೇಡ ರಿಬ್ಬನ್‌ಪಲ್ಲಿ 92 ರಿಂದ 122 ಕಿ.ಮೀ. ರಸ್ತೆಯವರೆಗೆ ಕೆಲಸ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1629 ದಿನಾಂಕ 1991ರ ಉತ್ತರದಲ್ಲಿ ಈ ರಸ್ತೆಯ 122 ಕಿ.ಮೀ.ನಿಂದ 140.20 ಕಿ.ಮೀ (ಆಂಧ್ರ ಗಡಿ) ವರೆಗೆ ಅಂದಾಜುಪತ್ರ ತಯಾರಾಗುತ್ತಿದೆಯೆಂದು ಶೀಘ್ರದಲ್ಲಿಯೇ ಗುತ್ತಿಗೆಗಳನ್ನು ಕರೆಯಲಾಗುವುದೆಂದು ತಿಳಿಸಲಾಗಿದ್ದರೂ ಈ ಕೆಲಸ ಇನ್ನೂ ಪ್ರಾರಂಭವಾಗದಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ಈ ಕೆಲಸ ಎಂದಿನಿಂದ ಪ್ರಾರಂಭವಾಗುವುದು?

ಈ) 1990-91ನೇ ಸಾಲಿನಲ್ಲಿ ಮಳಖೇಡದಿಂದ ರಿಬ್ಬನ್‌ಪಲ್ಲಿ ಗಡಿ ಪ್ರಾಂತದವರೆಗೆ 1.70 ಲಕ್ಷ ರೂ.ಗಳು ಹಾಗೂ ಸೇಡಂ ಕೂಡ್ಲಾ ರಸ್ತೆ ದುರಸ್ತಿಗಾಗಿ 2.53 ಲಕ್ಷ ಮಳಖೇಡ ರಾಜಶ್ರೀ ಸಿಮೆಂಟ್ ಕಾರ್ಖಾನೆ ಕ್ರಾಸಿನವರೆಗೆ 0.24 ಲಕ್ಷ ರೂ.ಗಳು ಖರ್ಚಾಗಿದೆಯೇ? ಹಾಗಿದ್ದಲ್ಲಿ ಯಾವ ಯಾವ ಕಿ.ಮೀ.ಗಳಲ್ಲಿ ಎಷ್ಟು ಹಣ ಖರ್ಚಾಗಿದೆ (ವಿವರಗಳನ್ನೊದಗಿಸುವುದು)

ಉ) ಈ ಪ್ರಕಾರ ಹಣ ಖರ್ಚು ಮಾಡಿದರೂ ಸಹ ಈ ರಸ್ತೆಗಳ ಮೇಲೆ ದೊಡ್ಡ ದೊಡ್ಡ ಕೊರಕಲು ಸದಾಕಾಲಕ್ಕೂ ಹಾಗೆಯೇ ಉಳಿದಿರಲು ಕಾರಣಗಳೇನು? ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಈ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿದ್ದು ಪ್ರಗತಿಯಲ್ಲಿದೆ.

ಆ) ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ 7.9.91. ಟೆಂಡರ್ ತೀರ್ಮಾನವಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಟೆಂಡರ್ ನಿರ್ಧಾರವಾದ ನಂತರ ಈ ಕೆಲಸ ಪ್ರಾರಂಭ ಮಾಡಲಾಗುವುದು.

ಈ) ವಿವರಗಳು ಕೆಳಕಂಡಂತಿವೆ:

ರಸ್ತೆಯ ಭಾಗ	ಸಿಬ್ಬಂದಿಗಳ ವೇತನ	ರಸ್ತೆಯ ದುರಸ್ತಿಗಾಗಿ ಮಾಡಿದ ವೆಚ್ಚ	ಒಟ್ಟು	ಕೆಲಸ ಕೈಕೊಂಡ ಕಿ.ಮೀ ಗಳ ವಿವರ
1) ಮಳಖೇಡದಿಂದ ರಿಬ್ಬನಪಲ್ಲಿ ಗಡಿ ಪ್ರಾಂತದವರೆಗೆ	0.48	1.22	1.70	ಕಿ.ಮೀ. 102 ರಿಂದ 10.20
2) ಸೇಡಂ ಕೂಡ್ಲಾ ರಸ್ತೆ	0.38	2.15	2.53	ಕಿ.ಮೀ. 152 ರಿಂದ 212 ವರೆಗೆ
3) ಮಳಖೇಡದಿಂದ ರಾಜಶ್ರೀ ಸಿಮೆಂಟ್ಸ್ ಕಾರ್ಖಾನೆ ಕ್ರಾಸ್ ವರೆಗೆ	0.12	0.12	0.24	ಕಿ.ಮೀ. 11.20 ರಿಂದ 13.20 ವರೆಗೆ

ಮೇಲಿನ ಮೂರು ರಸ್ತೆಗಳು ಸಿಮೆಂಟ್ ಕಾರ್ಖಾನೆಗಳು ಮತ್ತು ಶಹಾಬಾದ್ ಹಾಸುಬಂಡೆ ಖಣಿಗಳಿಂದ ಸುತ್ತುವರಿದಿವೆ. ಸಿಮೆಂಟ್ ಮತ್ತು ಶಹಾಬಾದ್ ಹಾಸುಬಂಡೆಗಳು ಕರ್ನಾಟಕ ಪ್ರಾಂತ್ಯ ಹಾಗೂ ನೆರೆಯ ರಾಜ್ಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ ಈ ರಸ್ತೆಗಳ ಮುಖಾಂತರವೇ ಸಾಗಿಸಬೇಕಾಗಿದೆ. ಆದಕಾರಣ ನಿಬಿಡವಾದ ಹಾಗೂ ಭಾರವುಳ್ಳ ವಾಹನಗಳ ಸಂಚಾರದಿಂದ ರಸ್ತೆಗಳ ತಳಹದಿ ಕುಸಿದು ರಸ್ತೆಗಳ ಮೇಲೈ ಮೇಲಿಂದ ಮೇಲೆ ಹಾಳಾಗಿ ತಗ್ಗು ದಿನ್ನೆಗಳು ಕಾಣಿಸಿಕೊಳ್ಳುತ್ತಿವೆ. ಇವುಗಳನ್ನು ಮುಚ್ಚಿ ಸಂಚಾರಕ್ಕೆ ಅನುವು ಮಾಡಲು ಲಭ್ಯವಿರುವ ಅನುದಾನದಿಂದ ನಿರ್ವಹಿಸಲಾಗುತ್ತಿಗೆ.

ಉ) ಮಳಖೇಡದಿಂದ ರಿಬ್ಬನ್‌ಪಲ್ಲಿ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 10ರ ಒಂದು ಭಾಗವಾಗಿದೆ ಹಾಗೂ ಸೇಡಂ ಕೋಡ್ಲಾ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 15ರ ಒಂದು ಭಾಗವಾಗಿದೆ. ಈ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿದ್ದು ಈ ಕೆಲಸಗಳು ಈಗಾಗಲೇ ಪ್ರಾರಂಭವಾಗಿದ್ದು ಪ್ರಗತಿಯಲ್ಲಿವೆ ಹಾಗೂ ಮಳಖೇಡದಿಂದ ರಾಜಶ್ರೀ ಸಿಮೆಂಟ್ಸ್ ಕಾರ್ಖಾನೆ ಕ್ರಾಸಿನ ಅಭಿವೃದ್ಧಿ ಕಾರ್ಯವನ್ನು ಪ್ರತಿ ಶಾಸಕರ ಮತ ಕ್ಷೇತ್ರಕ್ಕೆ ಒದಗಿಸಿದ ಹಣದಲ್ಲಿ ಮಂಜೂರಾಗಿದ್ದು ಈ ಕೆಲಸಕ್ಕೆ ಈಗಾಗಲೇ ಗುತ್ತಿಗೆ ನಿಗದಿಪಡಿಸಲಾಗಿದೆ. ಅಭಿವೃದ್ಧಿ ಕಾರ್ಯದಲ್ಲಿ ಡಾಂಬರೀಕರಣ ಸೇರಿದ್ದರಿಂದ ಕೆಲಸವನ್ನು ಮಳೆಗಾಲದ ನಂತರ ಪ್ರಾರಂಭಿಸಿ ಮುಗಿಸಲಾಗುವುದು.

ರಾಜ್ಯದ ರಾಜಧಾನಿಯ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನ

2350 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದ ರಾಜಧಾನಿಯ ಯವನಿಕಾದಲ್ಲಿ ಸಂಘ ಸಂಸ್ಥೆಗಳ, ಯುವಕ ಮಂಡಲಿಗಳ ಶ್ರೇಷ್ಠ ಪ್ರದರ್ಶನಗಳಿಗೆ ನಗದು ಸಹಿತ ಪ್ರೋತ್ಸಾಹ ನೀಡಿ ಅವಕಾಶ ಮಾಡಿ ಕೊಡಲಾಗುವುದೇ?

ಆ) ಯವನಿಕಾ ಬಿಟ್ಟು ರಾಜಧಾನಿಯ ಉಳಿದ ಯಾವ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುವುದು (ವಿವರ ನೀಡುವುದು)

ಇ) ಈ ರೀತಿ ಅವಕಾಶ ನೀಡುವುದಾದರೆ ಎಷ್ಟು ಪ್ರದರ್ಶನಗಳಿಗೆ ಮಿತಿಗೊಳಿಸಲಾಗುವುದು ಮತ್ತು ಎಷ್ಟು ಮಂದಿಗೆ ನಗದು ಪ್ರೋತ್ಸಾಹವನ್ನು ನೀಡಲಾಗುವುದು?

ಈ) ಉಡುಪಿ ತಾಲ್ಲೂಕು ಸಾಸ್ತಾನದ ಸವಿನಯ ಯುವಕ ಮಂಡಲವು ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಪ್ರಥಮ ಬಹುಮಾನ ಪಡೆದ ತನ್ನ ನಾಟಕ ಪ್ರದರ್ಶನಕ್ಕೆ ರಾಜಧಾನಿಯಲ್ಲಿ ಅವಕಾಶ ಮಾಡಿಕೊಡುವಂತೆ ಮನವಿ ಸಲ್ಲಿಸಿತ್ತೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ಗುತ್ತಿಗೆದಾರ ಕ್ಷೇತ್ರ